2. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ) ವಿಷಯ: ಸಿಂಧನೂರು ತಾಲ್ಲೂಕಿನಲ್ಲಿ ಹಬ್ಬರುವ ಮಲೇರಿಯಾ ಮತ್ತು ಕಾಲರಾದಿಂದ ಜನರು ಸತ್ತಿರುವ ಬಗ್ಗೆ.

+ ಶ್ರೀ ಹಂಪನಗೌಡ ಬಾದರ್ಲಿ(ಸಿಂಧನೂರು): ಮಾನ್ಯ ಅಧ್ಯಕ್ಷರೇ, ಪೌರಾಡಳಿತ ಸಚಿವರು ಪ್ರತಿನಿಧಿಸಿರತಕ್ಕಂಥ ಕನಕಗಿರಿ ಕ್ಷೇತ್ರಕ್ಕೆ ಸಂಬಂಧಪಟ್ಟ ಸಿಂಧನೂರು ತಾಲ್ಲೂಕಿನ ಚಿಕ್ಕಬೇರಿಗೆ ಗ್ರಾಮದಲ್ಲಿ ಕಳೆದ ಒಂದು ವಾರದಲ್ಲಿ 13 ಜನ ದುರ್ಮರಣಕ್ಕೆ ಈಡಾಗಿದ್ದಾರೆ. ಕಳೆದ ಎರಡು ತಿಂಗಳ ಅವಧಿಯಲ್ಲಿ ಅದರ ಸುತ್ತ ಮುತ್ತಲ 15 ಗ್ರಾಮಗಳಲ್ಲಿ ಮಲೇರಿಯಾ, ಕಾಲರಾ ಮತ್ತು ಇನ್ನಿತರ ಬೇರೆ ಬೇರೆ ರೋಗಗಳು ಹರಡಿದ್ದು ಅಲ್ಲಿ ಪರಿಸ್ಥಿತಿ ಬಹಳಷ್ಟು ಗಂಭೀರವಾಗಿದೆ. ನಾನು 17ನೇ ತಾರೀಖು ಆ ಗ್ರಾಮಕ್ಕೆ ಭೇಟಿ ನೀಡಿದ್ದೇನೆ. ಅದೇ ದಿನ ಜಿಲ್ಲಾಧಿಕಾರಿಗಳು, ಆರೋಗ್ಯಾಧಿಕಾರಿಗಳು ಮತ್ತು ಜಿಲ್ಲಾ ಪರಿಷತ್ತಿನ ಸಿ.ಇ.ಓ.ರವರು ಆ ಗ್ರಾಮಕ್ಕೆ ಭೇಟಿ ನೀಡಿದ್ದರು. ಅಲ್ಲಿಯವರೆಗೂ ಒಬ್ಬ ಅಧಿಕಾರಿಯೂ ಆ ಗ್ರಾಮಕ್ಕೆ ಭೇಟಿ ನೀಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನಾನು ಗ್ರಾಮಸ್ಥರಲ್ಲಿ ವಿಚಾರಿಸಿದಾಗ ಅವರು ತಿಳಿಸಿದಂತೆ, ಅವರು ಸತತವಾಗಿ ಎರಡು ತಿಂಗಳಿನಿಂದ ವೈದ್ಯಾಧಿಕಾರಿಗಳ ಸಂಪರ್ಕದಲ್ಲಿದ್ದಾರೆ. ಸುತ್ತಮುತ್ತಲ ಗ್ರಾಮಗಳಲ್ಲಿ ಮಲೇರಿಯಾ, ಕಾಲರಾದಂಥ ರೋಗಗಳಿಗೆ ಬಹಳಷ್ಟು ಮಂದಿ ಈಡಾಗಿದ್ದಾರೆ. ಒಂದೊಂದು ಗ್ರಾಮದಲ್ಲಿ ಶೇಕಡ 60-70ರಷ್ಟು ಜನ ಇಂಥ ರೋಗಗಳಿಂದ ನರಳುತ್ತಿದ್ದಾರೆ. ಸುಮಾರು ಎರಡರಿಂದ ಎರಡೂವರೆ ಸಾವಿರ ಜನಸಂಖ್ಯೆ ಇರತಕ್ಕಂಥ ಗ್ರಾಮ ಚಿಕ್ಕಬೇರಿಗೆ. ಅಲ್ಲಿ 400 ಮನೆಗಳಿದ್ದು, ಒಂದೊಂದು ಮನೆಯಲ್ಲಿ ನಾಲ್ಕೈದು ಜನರು ಈ ರೋಗದಿಂದ ನರಳುತ್ತಿದ್ದಾರೆ. ಇದು ಪ್ರಾರಂಭವಾಗಿ ಎರಡು ತಿಂಗಳು ಗತಿಸಿದರೂ ಒಬ್ಬ ಅಧಿಕಾರಿಯೂ ಆ ಗ್ರಾಮಕ್ಕೆ ಭೇಟಿ ಕೊಟ್ಟಿಲ್ಲ. ಒಪ್ಪತ್ತಿನ ಕೂಳಿಗೂ ಕೂಡ ಅಭಾವವಿರುವಂಥ ಪರಿಸ್ಥಿತಿ ಅಲ್ಲಿ ಇದೆ. ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ ಎ.ಎನ್.ಎಂ.ಓ.ಗಳು ಅಲ್ಲಿಗೆ ಹೋಗಿ ಆ ರೋಗಿಗಳಿಗೆ ಟ್ಯಾಬ್ಲೆಟ್‌ಗಳನ್ನು ಕೊಟ್ಟಿದ್ದಾರೆ. ಅದನ್ನು ತೆಗೆದುಕೊಂಡರೂ, ಹೊಟ್ಟೆಯಲ್ಲಿ ಸಂಕಟ, ತಲೆನೋವು, ಮೈಕೈ ನೋವು ಮತ್ತು ಚಳಿ ಜ್ವರದಿಂದ ನರಳುತ್ತಿದ್ದಾರೆ. ಆ ಟ್ಯಾಬ್ಲೆಟ್‌ಗಳನ್ನು ಜೀರ್ಣಿಸಿಕೊಳ್ಳುವಂಥ ಶಕ್ತಿಯೂ ಕೂಡ ಆ ಗ್ರಾಮಸ್ಥರಲ್ಲಿ ಇಲ್ಲ. ಇಂಥ ಗಂಭೀರ ಪರಿಸ್ಥಿತಿ ಅಲ್ಲಿ ಇದ್ದರೂ ಕೂಡ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಲೀ ಅಥವಾ ಆ ಕ್ಷೇತ್ರವನ್ನು ಪ್ರತಿನಿಧಿಸತಕ್ಕಂಥ ಪೌರಾಡಳಿತ ಮಂತ್ರಿಗಳಾಗಲೀ ಅಥವಾ ಆರೋಗ್ಯ ಮಂತ್ರಿಗಳಾಗಲೀ ಇದುವರೆಗೂ ಆ ಗ್ರಾಮಕ್ಕೆ ಭೇಟಿ ನೀಡಿಲ್ಲ. ಇದಕ್ಕೆ ಕಾರಣವೇನು? ಅಲ್ಲಿರುವಂಥ ಜನರನ್ನು ರಕ್ಷಣೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೋ ಅಥವಾ ಇಲ್ಲವೋ ಎಂದು ಕೇಳಬೇಕಾಗುತ್ತದೆ. ಈಗ

ಅಲ್ಲಿ ಗಂಭೀರ ಪರಿಸ್ಥಿತಿ ಉದ್ಭವವಾಗಿದೆ. ಆ ಜನರನ್ನು ರಕ್ಷಣೆ ಮಾಡುವಂಥ ಪರಸ್ಥಿತಿಯಲ್ಲಿ ಸರ್ಕಾರ ಇಲ್ಲ. ದಕ್ಷ ಮತ್ತು ಪಾರದರ್ಶಕ ಆಡಳಿತವನ್ನು ಕೊಡುತ್ತಿದ್ದೇವೆ ಎಂದು ರಾಜ್ಯ ಸರ್ಕಾರದವರು ಹೇಳುತ್ತಿದ್ದಾರೆ. ಆ ರೀತಿ ಆಡಳಿತ ನೀಡುವ ರೀತಿಯೆ ಇದು? ಮುಂದಿನ ವಿಚಾರಗಳನ್ನು ನಮ್ಮ ನಾಯಕರು ಪ್ರಸ್ತಾಪ ಮಾಡುತ್ತಾರೆ. ಅಲ್ಲಿ ಮಾಸ್ ಅಟ್ಯಾಕ್ ಆಗಿರುವುದರಿಂದ ಮಾಸ್ ಹೆಲ್ತ್ ಚೆಕ್ ಅಪ್ ಕ್ಯಾಂಪ್‌ಗಳ ಅವಶ್ಯಕತೆ ಬಹಳವಿದೆ. ಈ ವಿಚಾರದಲ್ಲಿ ಸರ್ಕಾರ ಗಮನ ಹರಿಸಬೇಕು ಎಂದು ನಾನು ಸರ್ಕಾರದ ಮೇಲೆ ಈ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೇ, ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿದಂತೆ ಅಲ್ಲಿ ಸುಮಾರು ಎರಡು ತಿಂಗಳಿಂದ 8-10 ಹಳ್ಳಿಗಳಲ್ಲಿ ವಿಚಿತ್ರವಾಗಿರತಕ್ಕಂಥ ಕಾಯಿಲೆ ಕಾಣಿಸಿಕೊಂಡಿದೆ. ಅದು ಮಲೇರಿಯಾ ಜ್ವರವೋ ಅಥವಾ ಕಾಲರವೋ ಎನ್ನುವುದನ್ನು ತಿಳಿಯಲು ಜಿಲ್ಲಾಮಟ್ಟದ ಆರೋಗ್ಯ ಅಧಿಕಾರಿಗಳಾಗಲೀ, ಜಿಲ್ಲಾಧಿಕಾರಿಗಳಾಗಲೀ ಜಿಲ್ಲಾ ಪರಿಷತ್ತಿನ ಅಧಿಕಾರಿಗಳಾಗಲೀ, ಕಳೆದ ಒಂದೂವರೆ ತಿಂಗಳಿಂದಲೂ ಅಲ್ಲಿಗೆ ಹೋಗಿ ನೋಡಿಲ್ಲ. ಸುಮಾರು 13 ಜನ ಸತ್ತ ಮೇಲೆ ಅಲ್ಲಿಗೆ ಹೋಗಿದ್ದಾರೆ. ಆಗ ಜನಗಳು ಪ್ರತಿಭಟನೆಯನ್ನು ಸಹಾ ಮಾಡಿದ್ದಾರೆ. ಇಂಥ ಸನ್ನಿವೇಶದಲ್ಲಿ ಸರ್ಕಾರ ಬೇಗ ಕ್ರಮ ತೆಗೆದುಕೊಳ್ಳಬೇಕು. ಆರೋಗ್ಯ ಮಂತ್ರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ತಿಳಿಸಬೇಕು ಮತ್ತು ಆ ಕಾಯಿಲೆ ಏನು ಎನ್ನುವುದನ್ನು ತಕ್ಷಣ ಪತ್ತೆ ಮಾಡಿ ಸೂಕ್ತವಾದ ವ್ಯವಸ್ಥೆ ಮಾಡಬೇಕು ಎಂದು ನಾನು ಆಗ್ರಹ ಮಾಡುತ್ತೇನೆ.

ಅಧ್ಯಕ್ಷರು: ಆರೋಗ್ಯ ಸಚಿವರಾದ ಮಾಲಕರೆಡ್ಡಿಯವರು ನನ್ನ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆ. ಈ ಬಗ್ಗೆ ರಿಪ್ಲೈ ಕೊಡಿಸಲು ಏರ್ಪಾಟು ಮಾಡುತ್ತೇನೆ. ನಾಗಪ್ಪನವರೇ, ನೀವು ಉತ್ತರ ಹೇಳುವಿರಾ, ಹೇಳಿ.

+ ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ, ಸಿಂಧನೂರು ತಾಲ್ಲೂಕಿನ ಚಿಕ್ಕಬೇರಿಗೆ, ಹಿರೇಬೇರಿಗೆ ಮತ್ತು ಭೋಗಾಪುರ ಗ್ರಾಮಗಳಲ್ಲಿ ಅನಾರೋಗ್ಯದ ವಿವಿಧ ತೊಂದರೆಗಳಿಂದ ಜನರು ಸತ್ತಿರುವುದು ನಿಜ. ಕಳೆದ 15 ದಿನಗಳಲ್ಲಿ ಸುಮಾರು 13 ಜನ ಸತ್ತಿದ್ದಾರೆ. ಚಿಕ್ಕಬೇರಿಗೆ ಗ್ರಾಮದಲ್ಲಿ 7 ಜನ, ಹಿರೇಬೇರಿಗೆ ಗ್ರಾಮದಲ್ಲಿ 3 ಜನ ಮತ್ತು ಬೋಗಾಪುರ ಗ್ರಾಮದಲ್ಲಿ 3 ಜನ ಸಾವಿಗೀಡಾಗಿದ್ದಾರೆ. ಸರ್ಕಾರ ಅದರ ಬಗ್ಗೆ ಸಾಕಷ್ಟು ಕಾಳಜಿ ವಹಿಸಿದ್ದು, ಅಲ್ಲಿಗೆ 15ನೇ ತಾರೀಖಿನಂದೇ ವೈದ್ಯರುಗಳನ್ನು ನೇಮಕ ಮಾಡಿದ್ದು, ಜಿಲ್ಲಾಧಿಕಾರಿಗಳು, ಸಿ.ಇ.ಓ.ರವರು ಮತ್ತು ಡಿ.ಹೆಚ್.ಓ.ರವರು ಸ್ಥಳಕ್ಕೆ ಭೇಟಿ ನೀಡಿದ್ದು ಅಲ್ಲಿನ ಜನರ ಸಮಸ್ಯೆಗಳನ್ನು ಅರಿತುಕೊಂಡಿದ್ದಾರೆ. ಮುಂದೆ ಆ ರೀತಿ ಆಗದ ಹಾಗೆ ನೋಡಿಕೊಳ್ಳುವ

ವ್ಯವಸ್ಥೆ ಮಾಡಿದ್ದೇವೆ. 17ನೇ ತಾರೀಖು ಬೆಳಿಗ್ಗೆ ನಾನು ಹಂಪನಗೌಡರೊಂದಿಗೆ ದೂರವಾಣಿಯ ಮುಖಾಂತರ ಮಾತನಾಡಿದ್ದೇನೆ. ಅವರಿಂದಲೂ ಮಾಹಿತಿ ತೆಗೆದುಕೊಂಡ ಮೇಲೆ, ಜಿಲ್ಲಾಡಳಿತ ಸೂಕ್ತ ಕ್ರಮ ತೆಗೆದುಕೊಂಡಿದೆ. ನಾನಾಗಲೀ ಜಿಲ್ಲಾ ಉಸ್ತುವಾರಿ ಸಚಿವರಾಗಲೀ, ಆರೋಗ್ಯ ಮಂತ್ರಿಗಳಾಗಲೀ ಅಲ್ಲಿಗೆ ಹೋಗಿಲ್ಲ ಎಂದು ಅವರು ಆಪಾದನೆ ಮಾಡುತ್ತಿದ್ದಾರೆ. ಅದರ ಬಗ್ಗೆ ನಾವು ಈಗಾಗಲೇ ಮಾತನಾಡಿದ್ದೇವೆ. ನಾನು ಮತ್ತು ಆರೋಗ್ಯ ಮಂತ್ರಿಗಳು ಇವತ್ತು ರಾತ್ರಿಯೇ ಅಲ್ಲಿಗೆ ಹೋಗಿ ಅಲ್ಲಿ ಸಂಬಂಧಪಟ್ಟಂಥ ಎಲ್ಲರೊಂದಿಗೆ ಚರ್ಚಿಸಿ ಮುಂದೆ ಆ ಗ್ರಾಮಕ್ಕೆ ಯಾವುದೇ ರೀತಿಯ ತೊಂದರೆಯಾಗದ ಹಾಗೆ ನೋಡಿಕೊಳ್ಳುತ್ತೇವೆ. ಈಗ ಬಂದಿರುವ ವರದಿ ಪ್ರಕಾರ ಸುಮಾರು 13 ಜನ ಸತ್ತಿದ್ದಾರೆ. ಆದರಲ್ಲಿ 3-4 ಜನರಿಗೆ ಫೀವರ್ ಅಟ್ಯಾಕ್ ಆಗಿದೆ. 2-3 ಸಣ್ಣ ಹುಡುಗರಿಗೂ ಅಟ್ಯಾಕ್ ಆಗಿದೆ ಎನ್ನುವ ವರದಿ ಇದೆ. ಹೆಚ್ಚಿನ ಮಾಹಿತಿ ಆರೋಗ್ಯ ಸಚಿವರ ಹತ್ತಿರ ಇದೆ. ಇಂದೇ, ನಾನು ಮತ್ತು ಆರೋಗ್ಯ ಸಚಿವರು ಅಲ್ಲಿಗೆ ಹೋಗಿ, ಅಲ್ಲಿರತಕ್ಕಂಥ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಇನ್ನು ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳಲು ನಾವು ವ್ಯವಸ್ಥೆ ಮಾಡುತ್ತೇವೆ.

ಆ) ವಿಷಯ: ಮಂಡ್ಯ ನಗರದಲ್ಲಿ ವಿದ್ಯಾರ್ಥಿನಿಯ ನಿಗೂಢ ಸಾವು.

ಶ್ರೀ ಎಂ.ಎಸ್. ಆತ್ಮಾನಂದ(ಮಂಡ್ಯ): ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರದಲ್ಲಿ ಕುಮಾರಿ ಆಶಾರಾಣಿ ಎನ್ನುವ ವಿದ್ಯಾರ್ಥಿನಿ ನಿಗೂಢವಾಗಿ ಸಾವನ್ನಪ್ಪಿದ್ದು ಅದು ಆತ್ಮಹತ್ಯೆಯೋ ಅಥವಾ ಕೊಲೆಯೋ ಎಂದು ಸಾರ್ವಜನಿಕರಲ್ಲಿ ಜಿಜ್ಞಾಸೆ ಹಾಗೂ ಸಂಶಯ ಮೂಡಿದ್ದು, ಅದರಿಂದ ಉಂಟಾಗಿರುವ ಪ್ರಕ್ಷುಬ್ಧ ವಾತಾವರಣವನ್ನು ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದರ ಸತ್ಯಾಸತ್ಯತೆಗಳನ್ನು ತಿಳಿಯಲು ಉನ್ನತವಾದ ಒಂದು ತನಿಖೆಯನ್ನು ಮಾಡಬೇಕು. ಅಲ್ಲಿ ಕಾನೂನು ವ್ಯವಸ್ಥೆಯನ್ನು ಕಾಪಾಡಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ನಿವೇದನೆ ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿ ನಡೆದಿರತಕ್ಕಂಥ ಘಟನೆಯಿಂದಾಗಿ ಅಲ್ಲಿ ಕಾನೂನಿನ ಸುವ್ಯವಸ್ಥೆಗೆ ಧಕ್ಕೆ ಬಂದಿದೆ. ಅಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನತಕ್ಕಂಥಾದ್ದು ಪತ್ರಿಕೆಗಳಲ್ಲಿ ವರದಿಯಾಗಿದೆ. ಅಲ್ಲಿ ನನಗೆ ಪರಿಚಯ ಇರುವವರ ಮೂಲಕವಾಗಿ ತಿಳಿದು ಬಂದ ಪ್ರಕಾರ, ಆ ಯುವತಿಯನ್ನು 3-4 ದಿನಗಳ ಹಿಂದೆ ಅಪಹರಣ ಮಾಡಿರತಕ್ಕಂಥ ವ್ಯಕ್ತಿಗಳು